ಕುಶಾಲನಗರದಿಂದ ಹಾಸನಕ್ಕೆ ಹೋಗುವ ರಸ್ತೆ ದುರಸ್ತಿ

470 (563): ಶ್ರೀ ಎ.ಎಂ. ಬೆಳ್ಳಿಯಪ್ಪ (ಸೋಮವಾರಪೇಟೆ):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಕೊಡಗು ಜಿಲ್ಲೆಯ ಕುಶಾಲನಗರದಿಂದ ಹಾಸನಕ್ಕೆ ಶಿರಂಗಾಲ ಮಾರ್ಗವಾಗಿ ಹೋಗುವ ರಸ್ತೆಯು ತುಂಬಾ ಹಾಳಾಗಿದ್ದು, ಕಳೆದ 10 ವರ್ಷಗಳಿಂದಲೂ ರಿಪೇರಿಯಾಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಬಂದಿದ್ದಲ್ಲಿ, ಅದನ್ನು ಯಾವಾಗ ದುರಸ್ತಿ ಮಾಡಲಾಗುವುದು ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಈ ರಸ್ತೆಯನ್ನು ಪ್ರತಿ ವರ್ಷವೂ ನಿರ್ವಹಣಾ ಅನುದಾನದಲ್ಲಿ ದುರಸ್ತಿ ಪಡಿಸಲಾಗುತ್ತಿದೆ. ಕಳೆದ ಹತ್ತು ವರ್ಷಗಳಲ್ಲಿ ಈ ರಸ್ತೆಯ ದುರಸ್ತಿಗಾಗಿ ಒಟ್ಟು ರೂ. 11.45 ಲಕ್ಷ ವೆಚ್ಚ ಮಾಡಲಾಗಿದೆ. ಈ ರಸ್ತೆಯ ಮೇಲ್ಮೈಯು ಕೆಟ್ಟಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈ ರಸ್ತೆಯ ಅತಿ ಕೆಟ್ಟು ಹೋದ ಭಾಗಗಳ ವಿಶೇಷ ದುರಸ್ತಿಯನ್ನು ಹಾಗೂ ಅಡ್ಡ ಮೋರಿಗಳ ದುರಸ್ತಿಯನ್ನು ಒಟ್ಟು 4.81 ಲಕ್ಷ ರೂ.ಗಳ ವೆಚ್ಚದಲ್ಲಿ ತೆಗೆದುಕೊಳ್ಳಲಾಗಿದೆ. ಅದರಲ್ಲಿ 1.5 ಕಿ.ಮೀ ಉದ್ದ ರಸ್ತೆಯ ಭಾಗವನ್ನು ಮರು ಡಾಂಬರೀಕರಣ ಮಾಡಲಾಗುವುದು.

ಹೊಳೇಹೊನ್ನೂರು – ಚನ್ನಗಿರಿ, ದಾವಣಗೆರೆ ರಸ್ತೆ ಡಬ್ಬಲ್ ರೋಡ್ ಮಾಡುವುದು

472 (757): ಶ್ರೀ ಕರಿಯಣ್ಣ (ಹೊಳೆಹೊನ್ನೂರು):–

ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಾವಣಗೆರೆ--ಚನ್ನಗಿರಿ ರಸ್ತೆಯನ್ನು ಡಬಲ್ ರೋಡು ಆಗಿ ಪರಿವರ್ತನೆ ಮಾಡಲಾಗುವುದೆ;

ಆ) ಇದರಂತೆ ಬಹು ಮುಖ್ಯವಾದ ಈ ರಸ್ತೆಯನ್ನು ಚನ್ನಗಿರಿ–ಹೊಳೆಹೊನ್ನೂರು–ಶಿವಮೊಗ್ಗದವರೆವಿಗೆ ಡಬ್ಬಲ್ ರಸ್ತೆ ಮಾಡಲಾಗುವುದೆ;

ಇ) ಇದನ್ನೆಲ್ಲ ಡಬ್ಬಲ್ ರಸ್ತೆ ಮಾಡುವುದರಿಂದ ಶಿವಮೊಗ್ಗ–ಹೊಳೆಹೊನ್ನೂರು–ಚನ್ನಗಿರಿ-ದಾವಣಗೆರೆ ಜನಗಳಿಗೆ ಅನುಕೂಲವಾಗುವುದು ನಿಜವೆ ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು):–

ಅ) ಸದ್ಯದಲ್ಲಿ ಈ ರಸ್ತೆಯನ್ನು ಜೋಡಿ ರಸ್ತೆ ಮಾಡುವ ಪ್ರಸ್ತಾಪ ಇರುವುದಿಲ್ಲ.

ಆ) ಸಧ್ಯದಲ್ಲಿ ಈ ಬಗ್ಗೆ ಪ್ರಸ್ತಾವನೆ ಇರುವುದಿಲ್ಲ.

ಇ) ಅನುಕೂಲವಾಗುವುದು.